# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ : 399 : ಎಎಫ್‌ಎನ್ : 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 31-10-2017.

## ಸುತ್ತೋಲೆ

**ವಿಷಯ:** ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಗೊಳಿಸುವ ವಿವಿಧ ಕಾಮಗಾರಿಗಳು ಮತ್ತು ಕಟ್ಟಡಗಳ ನಿರ್ಮಾಣದ ಗುತ್ತಿಗೆಯ ಕೆಲಸಕ್ಕಾಗಿ ನೊಂದಣಿ ಮತ್ತು ನವೀಕರಣವಾದ ಲೈಸೆನ್ಸ್‌ಗಳಿಗೆ ಲೋಕೋಪಯೋಗಿ ಇಲಾಖೆ ಸಂಹಿತೆ 2014ರ ತಿದ್ದುಪಡಿಯ ಆದೇಶವನ್ನು ಅಳವಡಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಲೋಇ : 296 : ಬಿಎಂಎಸ್ : 2017, ದಿನಾಂಕ: 03-09-2017.

---------

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು ಮತ್ತು ಬಜೆಟ್) ನಿಯಮಗಳು, 2006ರ ನಿಯಮ 74 (ಅಧ್ಯಾಯ-09) ರಲ್ಲಿ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ, ತಾಲ್ಲೂಕು ಪಂಚಾಯತಿಗಳ (ಹಣಕಾಸು ಮತ್ತು ಲೆಕ್ಕಗಳು) 1996ರ ನಿಯಮ 46 ಮತ್ತು 47 (ಅಧ್ಯಾಯ - XIII) ರಲ್ಲಿ ತಾಲ್ಲೂಕು ಪಂಚಾಯತಿಗಳ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮತ್ತು ಜಿಲ್ಲಾ ಪಂಚಾಯತಿಗಳ (ಹಣಕಾಸು ಮತ್ತು ಲೆಕ್ಕಗಳು) ನಿಯಮ 96ರ ನಿಯಮ 54(2) (ಅಧ್ಯಾಯ - XIII) ರಲ್ಲಿ ಜಿಲ್ಲಾ ಪಂಚಾಯತಿಗಳು ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ ಮತ್ತು ಉಗ್ರಾಣಗಳ ಕೈಪಿಡಿ ಮತ್ತು ಸರ್ಕಾರದಿಂದ ಹೊರಡಿಸಲಾದ ಇತರೆ ಸೂಚನೆಗಳು ಮತ್ತು ಆದೇಶಗಳು ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯಿಸತಕ್ಕದ್ದು ಎಂದಿರುತ್ತದೆ.

ಉಲ್ಲೇಖ(1)ರಲ್ಲಿನ ಸರ್ಕಾರದ ಆದೇಶದಲ್ಲಿ ಲೋಕೋಪಯೋಗಿ ಇಲಾಖೆಯು ಕರ್ನಾಟಕ ಲೋಕೋಪಯೋಗ ಸಂಹಿತೆ – 2014ರ ಚಾಪ್ಟರ್-19ರ ಕಂಡಿಕೆ 252, 254 ಮತ್ತು 256 ಗಳಿಗೆ ದಿನಾಂಕ: 03-09-2017ರಿಂದ ಜಾರಿಗೆ ಬರುವಂತೆ ಕೆಲವೊಂದು ತಿದ್ದುಪಡಿ, ಸೇರ್ಪಡೆ ಮತ್ತು ಬದಲಾವಣೆಗಳನ್ನು ಮಾಡಿ ಆದೇಶ ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರ ನೊಂದಣಿ ಮತ್ತು ನವೀಕರಣಗೊಳಿಸುವುದಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ 2014ರ ಅಧ್ಯಾಯ-19ರ ಕಂಡಿಕೆ 252, 254 ಮತ್ತು 256ಗಳಿಗೆ ಈ ಕೆಳಕಂಡಂತೆ ತಿದ್ದುಪಡಿ, ಸೇರ್ಪಡೆ ಹಾಗೂ ಬದಲಾವಣೆಯನ್ನು ಮಾಡಿರುತ್ತದೆ. ಗುತ್ತಿಗೆದಾರರ ನೊಂದಾವಣಿಗಾಗಿ ಹಾಗೂ ಲೈಸೆನ್ಸ್‌ಗಳ ಪುನರ್‌ನವೀಕರಣಕ್ಕಾಗಿ ವಿಧಿಸಲಾಗುವ ಫೀಜುಗಳ ಮೊತ್ತವನ್ನು ಹೆಚ್ಚಿಸಲಾಗಿರುತ್ತದೆ. ವಿವರಗಳನ್ನು ಕೆಳಗೆ ನಮೂದಿಸಲಾಗಿದೆ.

| Sl. No | Para No. | Existing | Modified |
|---|---|---|---|
| 1 | 252 | **Qualifications:** The following qualifications are laid down in regard to registration of the different classes of contractors | **Qualifications:** The following qualifications are laid down in regard to registration of the different classes of contractors |
| | (a) | **Class I:** Contractors shall have completed at least one single work in all respects, the cost of which is not less than Rs. 5 crore and the | **Class I:** Contractors shall have completed at least one single work in all respects, the cost of which is not less than Rs. 25 lakh |

| | | | |
|---|---|---|---|
| | (b)<br><br>(c)<br><br>(d) | total turnover should be over Rs.15 crore in the proceeding five years.<br>**Class II:** Contractors shall have completed at least one single work in all respects, the cost of which is not less than Rs. 1 crore and the total turnover should be over Rs.3 crore in the proceeding five years.<br><br>**Class III:** Contractors shall have completed at least one single work in the cost of which is not less than Rs.50 Lakhs and the total turnover should be over Rs.3 crore in the proceeding five years.<br><br>**Class IV:** Contractors shall have completed at least one single work the cost of which is not less than Rs.5 Lakhs and the total turnover should be over Rs.15 lakhs in the proceeding five years. | and the total turnover should be over Rs.75 lakh in the proceeding five years.<br>**Class II:** Contractors shall have completed at least one single work in all respects, the cost of which is not less than Rs. 10.00 lakh and the total turnover should be over Rs.30.00 lakh in the proceeding five years.<br><br>**Class III:** Contractors shall have completed at least one single work the cost of which is not less than Rs. 2.0 lakhs and the total turnover should be over Rs.10.0 lakh in the proceeding five years.<br><br>**Class IV:** Contractors shall have completed at least one single work the cost of which is not less than Rs. 50,000/- and the total turnover should be over Rs.5.0 lakhs in the proceeding five years. |
| 2 | 254-5 | **Application for Registration:**<br>A certificate of solvency in the prescribed from obtained from the Deputy Commissioner of the district concerned or a scheduled bank; in the case of Class-I Rs.100 lakh, Class-II Rs.50 lakh, Class-III contractors to the extent of Rs.25 lakh; in the case of Class IV contractors to the extent of Rs.10 lakhs shall accompany. | **Application for Registration:**<br>A certificate of solvency in the prescribed from obtained from the Deputy Commissioner of the district concerned or a scheduled bank; in the case of Class-I Rs.25.0 lakh, Class-II Rs.10.0 lakh, Class-III contractors to the extent of Rs.2.0 lakh; in the case of Class-IV contractors to the extent of Rs.50,000/- shall accompany. |
| 3 | 256 1 | **Renewal of Registration:**<br>Every registration effected and every certificate of registration granted under these rules, shall be valid from the date of registration of grant, for a period 5(five) years. Such registration may be renewed for a further period of (five) years, on application for renewal of registration in form PWF-14 itself, which will be subject to all the conditions laid down in these rules for first application for registration including payment of renewal registration fee as under for each category.<br><br>(a) Class-II Contractor - a fee of Rs. 2000/-<br><br>(b) Class-III Contractor - a fee of Rs. 1500/-<br><br>(c) Class-IV Contractor - a fee of Rs. 1000/- | **Renewal of Registration:**<br>Every registration effected and every certificate of registration granted under these rules, shall be valid from the date of registration of grant, for a period 5(five) years. Such registration may be renewed for a further period of (five) years, on application for renewal of registration in form PWF-14 itself, which will be subject to all the conditions laid down in these rules for first application for registration including payment of renewal registration fee as under for each category.<br><br>(a) Class-I Contractor - a fee of Rs. 5000/-<br><br>(b) Class-II Contractor - a fee of Rs. 2000/-<br><br>(c) Class-III Contractor - a fee of Rs. 1500/-<br><br>(d) Class-IV Contractor - a fee of Rs. 1000/- |

ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಗೊಳಿಸುವ ಕಾಮಗಾರಿಗಳು ಮತ್ತು ಕಟ್ಟಡ ನಿರ್ಮಾಣ ಮುಂತಾದ ವಿಷಯಕ್ಕೆ ಸಂಬಂಧಿಸಿದಂತೆ, ಲೋಕೋಪಯೋಗಿ ಇಲಾಖೆಯ "ಲೋಕೋಪಯೋಗಿ ಸಂಹಿತೆ"

ಹಾಗೂ ಅದಕ್ಕೆ ಮಾಡಲಾದ ತಿದ್ದುಪಡಿಯನುಸಾರ ಪ್ರಕ್ರಿಯೆಗಳನ್ನು ನಿರ್ವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಸೂಚಿಸಲಾಗಿದೆ.

31/10/17

(ಡಾ॥ ಆರ್ ಗೋವಿಂದರಾಜು)
ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.
2. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು.
4. ನಿರ್ದೇಶಕರು (ಪಂ.ರಾಜ್–1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ನಿರ್ದೇಶಕರು (ಪಂ.ರಾಜ್–2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ನಿರ್ದೇಶಕರು, ಮೂಲಭೂತ ಸೌಲಭ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ನಿರ್ದೇಶಕರು, ಮೂಲಭೂತ ಸೌಲಭ್ಯ–2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
8. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕಾಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳು.
9. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು.

**ಪ್ರತಿಗಳು**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಂಪಾದಕರು, ಕರ್ನಾಟಕ ವಿಕಾಸ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸಹಾಯಕ ನಿರ್ದೇಶಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – ಇವರ ಮಾಹಿತಿಗಾಗಿ ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.